# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ಗ್ರಾಮಾಂತರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-236255,
ಮೊಬೈಲ್: 9448994850
ಫ್ಯಾಕ್ಸ್: 08232-233600
ಇ-ಮೇಲ್: aeemdr2@rediffmail.com


ಕ್ರಮಾಂಕ: ಸ.ಕಾ.ನಿ.ಇಂ(ವಿ)/ಸಇಂ(ತಾಂ)/ಗ್ರಾ.ಉ.ವಿ/ಮದ್ದೂರು/2019-20/ 773-75 ದಿನಾಂಕ: 6/6/2019

## ಜನಸಂಪರ್ಕ ಸಭಾ ನಡಾವಳಿ

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅಧ್ಯಕ್ಷತೆಯಲ್ಲಿ ವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ: 05.06.2019 ರಂದು ಮಧ್ಯಾಹ್ನ 2.30 ಗಂಟೆಗೆ ಜರುಗಿದ ಗ್ರಾಮಾಂತರ ಉಪವಿಭಾಗದ ಜನ ಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂದಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ಮೋಹನ್ ಜಿ | ಪ್ರಕಾಇಂ(ವಿ) ಹಾಗೂ ಸಕಾಇಂ(ವಿ) | ಮದ್ದೂರು ವಿಭಾಗ, ಮದ್ದೂರು |
| 2 | ಶ್ರೀ ರಾಜೇಂದ್ರ | ಸಕಾಇಂ(ವಿ) | ಮದ್ದೂರು ಉಪವಿಭಾಗ-1 |
| 3 | ಶ್ರೀ ನಾಗರಾಜು | ಸಹಾಯಕ ಲೆಕ್ಕಾಧಿಕಾರಿ | ವಿಭಾಗೀಯ ಕಛೇರಿ, ಮದ್ದೂರು |
| 4 | ಶ್ರೀ ತೇಜ್ ಪ್ರಕಾಶ್ | ಕಿಇಂ(ವಿ) | ಕೆ.ಹೊನ್ನಲಗೆರೆ ಶಾಖೆ |
| 5 | ಶ್ರೀ ನಾಗೇಶ್ | ಕಿಇಂ(ವಿ) | ಕೆಸ್ತೂರು ಶಾಖೆ |
| 6 | ಶ್ರೀ ಸಂತೋಷ್ | ಕಿಇಂ(ವಿ) | ಬೆಸಗರಹಳ್ಳಿ ಶಾಖೆ |
| 7 | ಶ್ರೀ ಶಿವರಾಜು | ಪ್ರಕಿಇಂ(ವಿ) | ಕೌಡ್ಲೆ ಶಾಖೆ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಿಯಿಸಿ ಉತ್ತರಿಸಿದರು.

Scanned by CamScanner

| ಕ್ರಮ ಸಂಖ್ಯೆ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು –ಶ್ರೀ ನಂಜೇಗೌಡ, ಹಳೇಹಳ್ಳಿ ಗ್ರಾಮ | |
| 1 | ಸದರಿ ಗ್ರಾಹಕರು ಐಪಿ ಸೆಟ್ ಬಳಿ ಲೈನ್ ಜೋತು ಬಿದ್ದಿದ್ದು ಕಬ್ಬಿನ ಬೆಳೆಗೆ ತಗಲುತ್ತಿರುವುದಾಗಿ ತಿಳಿಸುತ್ತಾ, ವಿದ್ಯುತ್ ಕಂಬ ಅಳವಡಿಸಿಕೊಡಿ ಎಂದು ಕೋರಿದರು. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು–2 ರವರು ಮಾತನಾಡಿ ಕಿರಿಯ ಇಂಜಿನಿಯರ್(ವಿ) ಕೌದ್ಲೆ ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ಮಧ್ಯಂತರ ಕಂಬ ಅಳವಡಿಸಿ ಸಮಸ್ಯೆ ಬಗೆಹರಿಸುವಂತೆ ತಿಳಿಸಿದರು. |
| | ಗ್ರಾಹಕರು – ಶ್ರೀಮತಿ ಕೆಂಪಮ್ಮ, ಬಿದರಕೋಟೆ | |
| 2 | ಸದರಿ ಗ್ರಾಹಕರು ಅಕ್ರಮ–ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು, ಕಾರ್ಯಾದೇಶವಾಗಿದೆ. (Z-25741/ 08.03.2019) ಕಾಮಗಾರಿ ಕೈಗೊಂಡಿಲ್ಲ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಅಕ್ರಮ–ಸಕ್ರಮ ಯೋಜನೆಯ ಗುತ್ತಿಗೆದಾರರಿಗೆ ಮೊಬೈಲ್ ಮೂಲಕ ಮಾತನಾಡಿ ಆದಷ್ಟು ಬೇಗನೆ ಕೆಲಸ ಮಾಡುವಂತೆ ತಿಳಿಸಿದರು. |
| | ಗ್ರಾಹಕರು– ಶ್ರೀ ಚೌಡೇಶ, ನೀಲಕಂಠನಹಳ್ಳಿ ಗ್ರಾಮ | |
| 3 | ಸದರಿ ಗ್ರಾಹಕರು ನಮ್ಮ ಐಪಿ ಸೆಟ್ ಬಳಿ ಗಿಡ/ಮರಗಳು ಸೊಂಪು ಸೊಂಪಾಗಿ ಬೆಳೆದಿದ್ದು ಸಮರ್ಪಕ ವಿದ್ಯುತ್ ಬರುತ್ತಿಲ್ಲ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಕಿರಿಯ ಇಂಜಿನಿಯರ್(ವಿ) ಕೆ.ಹೊನ್ನಲಗೆರೆ ರವರಿಗೆ ಸೂಚಿಸಿ 3 ದಿನಗಳ ಒಳಗೆ ಜಂಗಲ್ ಕಟಿಂಗ್ ಮಾಡಿಸುವಂತೆ ಸೂಚಿಸಿದರು. |
| | ಗ್ರಾಹಕರು– ಶ್ರೀ ಎಸ್.ಕುಮಾರ, ಹರಕನಹಳ್ಳಿ ಗ್ರಾಮ | |
| 4 | ಗ್ರಾಹಕರು ಅಕ್ರಮ–ಸಕ್ರಮ ಯೋಜನೆಯಡಿ 2018ನೇ ಸಾಲಿನಲ್ಲಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ 2016/2017ನೇ ಸಾಲಿನ ಗ್ರಾಹಕರ ನಂತರ ಜೇಷ್ಠತಾ ಪಟ್ಟಿಯನುಸಾರ ಮುಂದಿನ ದಿನಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| | ಗ್ರಾಹಕರು– ಶ್ರೀ ಚಂದ್ರಶೇಖರ್, ಬುಳ್ಳನದೊಡ್ಡಿ | |
| 5 | ನಮ್ಮ ಐಪಿ ಲಿಮಿಟ್‌ನ 63 ಕೆವಿಎ ಪರಿವರ್ತಕ ವಿಫಲಗೊಂಡಿದ್ದು ಜರೂರಾಗಿಬದಲಾಯಿಸಿ ಕೊಡುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ವಿಭಾಗೀಯ ಉಗ್ರಾಣ ಪಾಲಕರಿಗೆ ತಿಳಿಸಿ ಜರೂರಾಗಿ ಪರಿವರ್ತಕ ವಿತರಿಸಿಕೊಡಲು ತಿಳಿಸಿದರು. |

Scanned by CamScanner

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ದಿನೇ ದಿನೇ ಸಮಸ್ಯೆಗಳು ಹಿಂದಿಗಿಂತಲೂ ಹೆಚ್ಚಾಗುತ್ತಿವೆ. ಆದರೂ ಸಹ ನಾವುಗಳು ಗ್ರಾಹಕರೊಂದಿಗೆ ಸಹಕರಿಸಿ ಸಮಸ್ಯೆಗಳನ್ನು ಬಗೆಹರಿಸಬೇಕು. ಮುಂದುವರೆದು ಪರಿವರ್ತಕ ವಿಫಲತೆಯನ್ನು ತಡೆಯಲು ಆದಷ್ಟು ಜಾಗರೂಕರಾಗಿರಬೇಕು. ವಿಫಲ ಪರಿವರ್ತಕಗಳನ್ನು ಬದಲಾಯಿಸಲು ವಿಭಾಗೀಯ ಉಗ್ರಾಣದಲ್ಲಿ ಪರಿವರ್ತಕಗಳು ಸಾಕಷ್ಟು ಲಭ್ಯವಿದ್ದು, ಜರೂರಾಗಿ ಬದಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಸಾಯಂಕಾಲ 5.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

6/6/19

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಗ್ರಾಮಾಂತರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಸಹಾಯಕ ಇಂಜಿನಿಯರ್(ತಾಂ), ಗ್ರಾಮಾಂತರ ಉಪವಿಭಾಗ, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,
ಮು.ಕ

Scanned by CamScanner